**<u>ದಿನಾಂಕಃ 05.10.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಡಿ.ಸಿ., ಪ್ರತಿವಾದಿ ಪರ ವಕೀಲರಿಂದ</u>**

ನಾನು 9 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಶಾಲಾ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.





ನಾನು ಮತ್ತು ಪ್ರತಿವಾದಿಯವರು ಒಟ್ಟು ಕುಟುಂಬದಲ್ಲಿ ವಾಸಿಸುತ್ತಿರುವ ಬಗ್ಗೆ ಚುನಾವಣಾ ಗುರುತಿನ ಚೀಟಿ ಮತ್ತು ಪಡಿತರ ಚೀಟಿಗಳು ಇರುತ್ತವೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ಪಡಿತರ ಚೀಟಿಯಲ್ಲಿ ನನ್ನ ತಾಯಿ ತಂದೆಯ ಹೆಸರು ಇರುತ್ತದೆ. ಆ ಪಡಿತರ ಚೀಟಿಯಲ್ಲಿ ಪ್ರತಿವಾದಿಯವರ ಹೆಸರು ಇರುವುದಿಲ್ಲ ಎಂದರೆ ಸರಿ.

ಈ ಮೊದಲು ನಾನು ಟೈಲರಿಂಗ್ ಕೆಲಸ ಮಾಡುತ್ತಿದ್ದೆ. ಈಗ ವ್ಯವಸಾಯ ಮಾಡುತ್ತಿದ್ದೇನೆ. ನಾನು ವೀರದಿಮ್ಮನಹಳ್ಳಿ ಯಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿಯವರು ರಾಮ್ ಜಿ ಹಟ್ಟಿಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ರಾಮ್‌ಜಿ ಹಟ್ಟಿಯಲ್ಲಿ ಸುಮಾರು 100 ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು 50 ರಿಂದ 60 ಮನೆಗಳು ಇವೆ ಎಂದು ನುಡಿಯುತ್ತಾರೆ. ನನ್ನ ಮನೆ ವೀರದಿಮ್ಮನಹಳ್ಳಿಯಲ್ಲಿಯ ಪೂರ್ವದ ಕಡೆ ಇರುತ್ತದೆ ಎಂದರೆ ಸರಿ.

ನಾನು ನ್ಯಾಯಾಲಯಕ್ಕೆ ಆಧಾರ್ ಕಾರ್ಡ್, ಶಾಲಾ ದಾಖಲಾತಿಗಳು ಹಾಗೂ ಪಡಿತರ ಚೀಟಿಯನ್ನು ಹಾಜರುಪಡಿಸಿರುತ್ತೇನೆ. ನಾನು ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದೇನೆ ಎಂದರೆ ಸರಿ.

ವ್ಯಾಜ್ಯದ ಜಮೀನು ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ ಅಂತ ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ದೃಢೀಕೃತ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ನಾನು ಸೃಷ್ಟಿ

ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 138 ರಲ್ಲಿ ಕ್ಷೇತ್ರ 6 ಎಕರೆ 18 ಗುಂಟೆ ಇರುತ್ತದೆ. ಸರ್ವೆ ನಂ. 138 ರಲ್ಲಿ ಒಟ್ಟು ಕ್ಷೇತ್ರ 10 ಎಕರೆ ಇರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಿ.31.12.1980 ರಂದು ದಾವಾ ಸ್ವತ್ತನ್ನು ತನ್ನ ಹೆಂಡತಿ ಸೀತಾಬಾಯಿ ಇವರೊಂದಿಗೆ ಜಂಟಿ ಮಾಲೀಕತ್ವದಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸೀತಾಬಾಯಿ ಮೃತಳಾದ ನಂತರ ದಾವಾ ಸ್ವತ್ತು 1 ಮತ್ತು 2 ನೇ ಪ್ರತಿವಾದಿಯವರ ಹೆಸರಿಗೆ ಪೌತಿ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆಯ ಹೆಸರು ದೊಡ್ಡಭೀಮನಾಯ್ಕ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಭೀಮ್ಲಾನಾಯ್ಕ ಅಂತಲೂ ಇರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ನನ್ನ ತಂದೆಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ಸೀತಾಬಾಯಿ ತಂದೆಯ ಹೆಸರು ಜಿಗಿನನಾಯ್ಕ ಎಂದರೆ ನನಗೆ ಗೊತ್ತಿಲ್ಲ. ಜಿಗಿನಾನಾಯ್ಕನ ತಂದೆಯ ಹೆಸರು ರಾಮ್‌ಜಿನಾಯ್ಕ ಎಂದರೆ ನನಗೆ ಗೊತ್ತಿಲ್ಲ. ಸೀತಾಬಾಯಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸಾಕ್ಷಿಯು 2 ನೇ ಹೆಂಡತಿ ಎಂದು ನುಡಿಯುತ್ತಾರೆ. ವೀರದಿಮ್ಮನಹಳ್ಳಿಯಲ್ಲಿ ಕ್ರಮ ಸಂಖ್ಯೆಃ 653 ರಿಂದ 658 ಇವುಗಳು ಜಿಗಿನನಾಯ್ಕ ಮತ್ತು ಸೀತಾಬಾಯಿ ಇವರ ಹೆಸರಿನಲ್ಲಿ ನಮೂದು ಇರುತ್ತವೆ ಎಂದರೆ ಸಾಕ್ಷಿಯು ಸೃಷ್ಟಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 2015 ರ ಚುನಾವಣಾ ಮತದಾರರ ಪಟ್ಟಿಯಲ್ಲಿ ಕ್ರಮ ಸಂಖ್ಯೆಃ 392 ಮನೆ ಸಂಖ್ಯೆಃ 75 ನೇದ್ದರಲ್ಲಿ ನನ್ನ ತಾಯಿ ಹೆಸರು ಗೌರೀಬಾಯಿ ಇವರ ಹೆಸರಿನಲ್ಲಿ ಮನೆ ನಮೂದು ಇರುತ್ತದೆ ಎಂದರೆ ಸರಿ. ಕ್ರಮ ಸಂಖ್ಯೆಃ 398 ಮತ್ತು 399 ರಲ್ಲಿ ನನ್ನ ಮತ್ತು ನನ್ನ ಹೆಂಡತಿಯ ಭಾವಚಿತ್ರ ಇರುತ್ತದೆ ಎಂದರೆ ಸರಿ. ಸದರಿ ಕ್ರಮಸಂಖ್ಯೆಃ 398 ಮತ್ತು 399 ರಲ್ಲಿ 1 ನೇ ಪ್ರತಿವಾದಿಯ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

ತಹಶೀಲ್ದಾರ್ ರವರು ಕೊಟ್ಟಿರುವ ವಂಶವೃಕ್ಷದ ಪ್ರಕಾರ ಸೀತಾಬಾಯಿ 1 ನೇ ಪ್ರತಿವಾದಿಯ ಒಬ್ಬಳೇ ಹೆಂಡತಿ ಎಂದರೆ ಸಾಕ್ಷಿಯು 2 ನೇ ಹೆಂಡತಿ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಸೀತಾಬಾಯಿ ಅಂತ ಒಬ್ಬಳೇ ಹೆಂಡತಿ ಇದ್ದಳು ಎಂದರೆ ಸರಿಯಲ್ಲ. ನನ್ನ ತಾಯಿ 1 ನೇ ಪ್ರತಿವಾದಿಯ ಹೆಂಡತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಅಡ್ಡ ಹೆಸರನ್ನು ದೊಡ್ಡಭೀಮಾನಾಯಕ ಅಂತ ಸೇರಿಸಿ ನಾನು ಸುಳ್ಳು ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಾಯಿಯನ್ನು ವಿಚಾರಣೆ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಅವರಿಗೆ ಪಾರ್ಶ್ವವಾಯು ಹೊಡೆದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಯಾವುದೇ ಆರೋಗ್ಯದ ಸಮಸ್ಯೆ ಇರುವುದಿಲ್ಲ ಎಂದರೆ ಸರಿಯಲ್ಲ. ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತೋರಿಸಲು ದಾಖಲೆಗಳು ನನ್ನ ಬಳಿ ಇರುತ್ತವೆ. ನನ್ನ ತಾಯಿ 2 ವರ್ಷಗಳಿಂದ ಆರೋಗ್ಯ ಸರಿಯಿರುವುದಿಲ್ಲ . ಆದ್ದರಿಂದ ಅವರಿಗೆ ಓಡಾಡಲು ಆಗುವುದಿಲ್ಲ.

**ಅಸಲು ದಾವಾ ನಂಃ 61/2015**
**ಪಿ.ಡಬ್ಲ್ಯೂಃ** -01

ಪ್ರತಿವಾದಿಯವರಿಗೆ ನಾನು ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿ ಮತ್ತು ಸೀತಾಬಾಯಿ ಕ್ರಯಕ್ಕೆ ಪಡೆದ ಆಸ್ತಿ ಆಗಿದ್ದು, ಅದರಲ್ಲಿ ನಾನು ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದುರಾಸೆಯಿಂದ ಆಸ್ತಿಯನ್ನು ಹೊಡೆಯಬೇಕೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.